ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.7/2018.. P.W.-1.**

ದಿನಾಂಕ:**06.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಸಿ ವಿ ಎಸ್ ವಕೀಲರಿಂದ:-

ನಿಪಿ34 ರ ಸೇಲ್ ಡೀಡ್ ಅನ್ನು ನನಗೆ ಪಕ್ಕದ ಜಮೀನಿನವರಾದ ಗೋಪಾಲಪ್ಪ ರವರು ನೀಡಿರುತ್ತಾರೆ. ನಿಪಿ34 ನ್ನು ಈ ದಾವೆಯಲ್ಲಿ ಏಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದರಲ್ಲಿ ರಸ್ತೆಯ ಮಾರ್ಜಿನ್ ಅನ್ನು ಸ್ಕೆಚ್ ನಲ್ಲಿ ಕಾಣಿಸಿರುತ್ತಾರೆ, ಆ ಕಾರಣ ಹಾಜರುಪಡಿಸಿರುತ್ತೇನೆ. ನಿಪಿ34 ರಲ್ಲಿ ರಸ್ತೆ ಮಾರ್ಜಿನ್ ಬಗ್ಗೆ ನಮೂದು ಇಲ್ಲ ಎಂದರೆ ಸೇಲ್ ಡೀಡ್‌ನಲ್ಲಿ ಸ್ಕೆಚ್ ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ದಾವೆಗೂ ನಿಪಿ 34 ಕ್ಕು ಸಂಬಂಧವಿಲ್ಲ.

ನಿಪಿ35 ರಿಂದ 38 ರ ದಾಖಲೆಗಳನ್ನು ಈ ದಾವೆಯಲ್ಲಿ ಏಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸರ್ವೆ ಸ್ಕೆಚ್ ಸದರಿ ದಾಖಲೆಗಳಲ್ಲಿ ಕಾಣಿಸಿರುವುದರಿಂದ ನಾನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 35 ರಲ್ಲಿ ಸರ್ವೆ ಸ್ಕೆಚ್ ಬರೆದಿಲ್ಲ ಎಂದರೆ ಸರಿ. ನಿಪಿ 37 ಮತ್ತು ಅದರ ಜೋತೆ ಇರುವ ಮಹಜರ್ ಮತ್ತು ನಕಾಶೆಯಲ್ಲಿ ರಸ್ತೆಯ ಮಾರ್ಜಿನ್ ಇಂತಿಷ್ಟು ಅಡಿ ಅಗಲ ಮತ್ತು ಉದ್ದ ಇದೆ ಎಂದು ನಮೂದು ಮಾಡಿರುವುದಿಲ್ಲ.

ನಾನು ಹಾಜರುಪಡಿಸಿರುವ ಪೋಟೋ 28 ಅನ್ನು ರಸ್ತೆಯ ಮಾರ್ಜಿನ್ ಗ್ಯಾಪ್ ತೋರಿಸಲು ಸಲ್ಲಿಸಿರುತ್ತೇನೆ. ನಿಪಿ 28 ರಲ್ಲಿ ಕಾಣುವ ಶಾಲೆಯು ಮರವಂಜಿ ರಸ್ತೆಯ ಮದ್ಯದಿಂದ ಸುಮಾರು 50 ಅಡಿ ದೂರದಲ್ಲಿ ಇರಬಹುದು. ರಸ್ತೆಯ ಮದ್ಯದಿಂದ 50 ಅಡಿ ದೂರದಲ್ಲಿ ಇರುವ ಶಾಲೆ ಅಂದರೆ 50 ಅಡಿಯ ರಸ್ತೆಯ ಮಾರ್ಜಿನ್ ಆಗಿರುತ್ತದೆಯೇ ಎಂದರೆ ಇರಬಹುದು.

ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿಸಿರು ಅನ್ಯಾಕ್ರಾಂತದ ದಾಖಲೆಯಲ್ಲಿ ಎಷ್ಟು ಅಡಿ ರಸ್ತೆ ಮಾರ್ಜಿನ್ ಎಂದು ನಮೂದು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅನ್ಯಾಕ್ರಾಂತ ಮಾಡುವಾಗ ದಾವಾ ಸ್ವತ್ತಿನಲ್ಲಿ ಎಷ್ಟು ಅಡಿ ಜಾಗವನ್ನು ರಸ್ತೆಯ ಮಾರ್ಜಿನ್ ಗೆ ಎಂದು ಕಳೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಾನು ರಸ್ತೆಯ ಮಾರ್ಜಿನ್ ಮಾಡಲು ಸರ್ಕಾರಕ್ಕೆ ಪರಿಚ್ಛೇದನ ಪತ್ರ ಬರೆದುಕೊಟ್ಟಿಲ್ಲ. ಅನ್ಯಾಕ್ರಾಂತ ಮಾಡುವಾಗ ದಾವಾ ಸ್ವತ್ತಿನಲ್ಲಿ ರಸ್ತೆಯ ಮಾರ್ಜಿನ್ ಗೆ ಎಂದು ಎಷ್ಟು ವಿಸ್ತೀರ್ಣದ ಜಾಗವನ್ನು ಕಳೆದಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಕಡೂರಿನಿಂದ ಮರವಂಜಿಗೆ ಹೋಗುವ ರಸ್ತೆಯ ಮದ್ಯದಿಂದ 45 ಮೀ ದೂರದವರೆಗೂ ರಸ್ತೆಯ ಮಾರ್ಜಿನ್ ಇದೆ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಪೈಕಿ ಎಷ್ಟು ವಿಸ್ತೀರ್ಣದ ಜಾಗ ರಸ್ತೆಯ ಮಾರ್ಜಿನ್ ಗೆ ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಅನಾ್ಯಕ್ರಾಂತ ಮಾಡಿಸುವಾಗ ದಾವಾ ಸ್ವತ್ತಿನ ಪೈಕಿ ಎಷ್ಟು ವಿಸ್ತೀರ್ಣದ ಜಾಗವನ್ನು ರಸ್ತೆಗೆಂದು ಕಳೆದಿರುತ್ತಾರೆ ಎಂದು ನಾನು ದಾಖಲೆ ಪಡೆದಿರುವುದಿಲ್ಲ.

ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಖರೀದಿಸಿದಾಗಿನಿಂದ ಈ ದಿನದವರೆಗೂ ಸಹಃ ನಾನು ದಾವಾ ಸ್ವತ್ತಿನ ಪೈಕಿ ಎಷ್ಟು ವಿಸ್ತೀರ್ಣದ ಜಾಗ ರಸ್ತೆಯ ಮಾರ್ಜಿನ್ ಗೆ ಹೋಗುತ್ತದೆ ಎಂದು ನಾನು ಅಳತೆ ಮಾಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ರಸ್ತೆಯ ಮಾರ್ಜಿನ್ ಕಳೆದು ಎಷ್ಟು ವಿಸ್ತೀರ್ಣದ ಸ್ವತ್ತು ಉಳಿಯುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನಲ್ಲಿ ರಸ್ತೆಯ ಮಾರ್ಜಿನ್ ಕಳೆದು ಎಷ್ಟು ಸ್ವತ್ತು ಉಳಿಯುತ್ತದೆ ಎಂದು ಗೊತ್ತಿಲ್ಲದೇ ಇರುವುದರಿಂದ ನಾನು ಪ್ರತಿವಾದಿಗಳ ವಿರುದ್ಧ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಸ್ವತ್ತನ್ನು ಅತಿಕ್ರಮಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.